ಫೋನ್. 'ಗುರಲಿಂಗಜ್ಜಿ ಶರಣಜ್ಜಿಯನ್ನು ಜೊತೆಗೆ ಕರ್‍ಕೊಂಡು ಅಮ್ಮನ ಮನೆಗೆ ಬಂದಿದ್ದಾರಂತೆ. ಕಾರ್‍ನಲ್ಲಿ ಹೊರಡ್ತಿದೀವಿ. ಬೆಳಿಗ್ಗೆ ಹೊತ್ತಿಗೆ ಬರ್‍ತೀವಿ' ಕಾತ್ಯಾಯಿನಿಗೆ ಖುಷಿಯಾಯಿತು. ಅಮ್ಮನಿಗಿಂತ ಶರಣಜ್ಜಿ ಗುರುಲಿಂಗಜ್ಜಿ ನನಗೆ ಆತ್ಮೀಯರು. ಗುರುಲಿಂಗಜ್ಜಿಗೆ 90ರ ಪ್ರಾಯ, ಶರಣಜ್ಜಿಗೆ 70ರ ಪ್ರಾಯ.

'ಪುಟ್ಟೀ, ಮದ್ವೆ ಮಾಡ್ಕಳೇ, ನಿಂಗೆ ಒಳ್ಳೇ ಗಂಡ ಸಿಗ್ಲಿ ಅಂತ ದ್ಯಾವ್ರನ್ನ ಕೇಳ್ತೀನಿ' ಅಂತ ಗುರುಲಿಂಗಜ್ಜಿ ಪದೇ ಪದೇ ಹೇಳ್ತಿತ್ತು.

ಅಮ್ಮ ಮಂಜುಳ ಸರ್ಕಾರಿ ಹೈಸ್ಕೂಲಿನ ಸೈನ್ಸ್ ಟೀಚರ್. ಆ ಕಾಲಕ್ಕೆ ಕ್ರಾಂತಿಕಾರಿ. ಕೆಲಸಕ್ಕೆ ಸೇರಿದಾಗ ತನ್ನ ಕೊಲೀಗ್ ದಯಾನಂದ ಭಂಡಾರಿಯನ್ನು ಪ್ರೀತಿಸಿದಳಂತೆ. ತಾಯಿಯ ಸನ್ಯಾಸಿ ಜೀವನ, ಅವಳ ನೋವು, ಸಂಕಟ ಕಂಡವಳಿಗೆ ತನಗೊಂದು ಪ್ರೀತಿಯ ಬದುಕು ಬೇಕು ಅನ್ನಿಸಿತ್ತು. ಒಂದು ವರ್ಷ ಎಲ್ಲ ಸರಿ ಇತ್ತಂತೆ. ನಾನು ಹುಟ್ಟಿದೆನಂತೆ. ನನಗೂ ಇಲ್ಲ, ನಿನಗೂ ಇಲ್ಲ, ಕೂಸಿಗೆ ಹಸಿರು ಕಣ್ಣು ಹೇಗೆ ಬಂತು ಎಂದನಂತೆ. ನಿನ್ನ ನಡತೆಯೇ ಸರಿ ಇಲ್ಲ ಎಂದನಂತೆ. ಅನುಮಾನ ರೋಗ ಶುರುವಾಯಿತು. ಯಾರೊಡನೆ ಮಾತಾಡಿದರೂ, ಜೊತೆಗೆ ನಾಲ್ಕು ಹೆಜ್ಜೆ ಹಾಕಿದರೂ ತೀವ್ರ ಅಸಹನೆ, ಚುಚ್ಚು ಮಾತು. ಆಗಾಗ ಕದ್ದು ಮುಚ್ಚಿ ಹಿಂಬಾಲಿಸಿ ಪರೀಕ್ಷಿಸತೊಡಗಿದಾಗ ಅಮ್ಮನಿಗೆ ಹಿಂಸೆ ಎನಿಸಿತಂತೆ. ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಕೂಸಿನ ಬಗ್ಗೆ ದ್ವೇಷ. ಅದು ನನ್ನದಲ್ಲ ಎಂಬ ವಾದ. ಅಮ್ಮ ಡಿ.ಎನ್.ಎ ಪರೀಕ್ಷೆ ಮಾಡಿಸೋಣ ಎಂದಳಂತೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೇ? ಅದು ಹಾದರದ ಕೂಸು ಎಂದು ಅಬ್ಬರಿಸಿದನಂತೆ. ಕೊನೆಕೊನೆಗೆ ಊಟಕ್ಕೆ ವಿಷ ಹಾಕಿದ್ದೀ ಎಂಬ ಆರೋಪ. ಕೂಸಿನ ತಂದೆ ಯಾರು ಹೇಳು ಎಂಬ ಒತ್ತಾಯ. ಅಮ್ಮ ರೋಸಿ ಮನೋವೈದ್ಯರಲ್ಲಿಗೆ ಹೋಗೋಣ ಎಂದಳಂತೆ. ನನಗೆ ಹುಚ್ಚಿಲ್ಲ. ನಿನ್ನಂತ ನಡತೆಗೆಟ್ಟವಳ ಜೊತೆಗೆ ಬದುಕಲಾರೆ ಎಂದನಂತೆ. ಪರಸ್ಪರ ಒಪ್ಪಿಗೆಯ ಮೇಲೆ ವಿಚ್ಛೇದನವಾಯಿತು. ಆತ ಕೂಸಿನ ತಂಟೆಗೆ ಬರದೆ ತನ್ನೂರು ಕರಾವಳಿಯ ಕಡೆಗೆ ವರ್ಗ ಮಾಡಿಸಿಕೊಂಡು ಹೋದನಂತೆ.

2 ವರ್ಷದ ಕೂಸಿನ ಜೊತೆಗೆ ಅಮ್ಮ ಒಂಟಿಯಾಗಿ ಬದುಕುತ್ತಿದ್ದಳು. ಆಗ ಪರಿಚಯವಾದವರು ಪಂಚಾಕ್ಷರಯ್ಯ. ಪೋಸ್ಟಲ್ ಅಸಿಸ್ಟಂಟ್ ಆದ ಆತ ಅನಾಥನಾಗಿ ಮಠದಲ್ಲಿ ಬೆಳೆದರಂತೆ. ಅಮ್ಮನ ಬಗ್ಗೆ ಎಲ್ಲ ಗೊತ್ತಿದ್ದೂ ಒಪ್ಪಿ ಅವಳನ್ನು ಲಗ್ನವಾದರಂತೆ. ಅಮ್ಮನನ್ನು ಜೀವಕ್ಕಿಂತ ಹೆಚ್ಚು ಪ್ರೀತಿಸಿದರು. ನನ್ನನ್ನು ಒಪ್ಪಲಿಲ್ಲ. ಮೊದಮೊದಲು ನಿರ್ಲಕ್ಷ್ಯ, ನಂತರ ಅಸಹನೆಯಾಗಿ, ಸಿಡಿಮಿಡಿಯಾಗಿ ತನ್ನ ಚಂದದ ಸಂಸಾರ ಹಾಳಾದೀತೆಂದು ಹೆದರಿ ಅಮ್ಮ ನಾಲ್ಕು ವರ್ಷದ ಮಗುವನ್ನು ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದಳಂತೆ. ಅದೂ ದೂರದ ಬೇರೆ ಊರಲ್ಲಿ. ರಜೆ ಬಂದಾಗ ಶರಣಜ್ಜಿಯ ಮನೆಗೆ ಬರುತ್ತಿದ್ದೆ. ಅಮ್ಮ ಅಲ್ಲಿಗೆ ಬರಬೇಕಾದಾಗ ತನ್ನಿರವು ಬೇಡವೆನಿಸಿ ಆಕೆಯ ಅಜ್ಜಿ ಗುರುಲಿಂಗವ್ವನ ಮನೆಗೆ ಕಳಿಸುತ್ತಿದ್ದಳು. ತನ್ನ ಚಂದದ ಸಂಸಾರಕ್ಕೆ ಮಗಳ ನೆರಳು ಬೀಳದಂತೆ ನೋಡಿಕೊಂಡಳು!

ಶರಣಜ್ಜಿ, ಗುರುಲಿಂಗಜ್ಜಿ ಇಬ್ಬರೂ ನನ್ನನ್ನು ಎದೆಗೆ ಅವಚಿಕೊಂಡು ಪ್ರೀತಿ ತೋರಿಸಿದರು.

ಶರಣಜ್ಜಿ ನನ್ನ ತಲೆಸವರಿ ಪ್ರೀತಿಯಿಂದ ಹೇಳಿದ್ದರು. 'ಎಷ್ಟು ಬೇಕಾದರೂ ಓದು ಮಗಾ, ನಾನು ಓದಿಸ್ತೀನಿ. ನೀನು ಓದಿ ಚಂದಾಗಿ ಬದುಕಬೇಕು' ಎಂದು ಆಕೆ ಎಲ್ಲ ಖರ್ಚಿನ ಹೊಣೆ ಹೊತ್ತಳು. ಶಿವೂ ಮಾಮನ ಬೆಂಬಲವೂ ಇತ್ತು.

ಶರಣಜ್ಜಿಯದು ನೋವಿನ ಕಥೆ; 16 ರ ವಯಸ್ಸಿಗೆ ಲಗ್ನ, 30ರ ಹರೆಯದ ಆಕೆಯ ಗಂಡನಿಗೆ ಅಧ್ಯಾತ್ಮದ ಹುಚ್ಚು. ವೈರಾಗ್ಯ, ಸನ್ಯಾಸದ ಹಂಬಲ. ಒಬ್ಬರೇ ದುಡಿದು ಮನೆತನ ಕಟ್ಟಿದ ಗಟ್ಟಿಗಿತ್ತಿ ಅವರು. ತನ್ನ ಇವತ್ತಿನ ಇಂಜಿನಿಯರಿಂಗ್ ಪದವಿ, ಕೈತುಂಬ ಸಂಬಳದ ಸಾಫ್ಟ್‌ವೇರ್ ಉದ್ಯೋಗ ಎಲ್ಲದಕ್ಕೂ ಶರಣಜ್ಜಿ ಕಾರಣ.

ಇನ್ನು ಅಮ್ಮನ ಅಜ್ಜಿ ಗುರುಲಿಂಗವ್ವನದು ಹೋರಾಟದ ಬದುಕು. ಪೇಟೆಯಲ್ಲೊಂದು ಮನೆ ಮಾಡಿ ಅಲ್ಲೊಂದು ಹೆಣ್ಣಿನ ಜೊತೆ ಬದುಕುತ್ತಿದ್ದ ಆಕೆಯ ಗಂಡ ಸಾಯಂಬೀಳ ಹೊಡೆದರೂ ಜಗ್ಗದೆ ಕೋರ್ಟಿಗೆ ಹೋಗಿ ತನ್ನ ಚೂರುಪಾರು ಚಿನ್ನ ಮಾರಿ ಕೇಸಿನ ಖರ್ಚು ಭರಿಸಿದಳಂತೆ. ಕೊನೆಗೂ ಕೋರ್ಟು ಆಸ್ತಿಯಲ್ಲಿ ಗುರುಲಿಂಗಜ್ಜಿಯ ಗಂಡ ಮಾಡಿದ್ದ ಸಾಲ ತೀರಿ ಉಳಿದ 18 ಎಕರೆ ಜಮೀನನ್ನು ಇವರ ವಶಕ್ಕೆ